ಸದರಿ ಕಂಪನಿಗಳ ನಷ್ಟಕ್ಕೆ ಈ ಕಾರಣಗಳೂ ಸೇರಿವೆ;

1. ಖಾಸಗೀ ಸಂಸ್ಥೆಗಳಿಂದ ಪೈಪೋಟಿ,

2. ಕಾಲಕಾಲಕ್ಕೆ ಬದಲಾಗುವ ತಂತ್ರಜ್ಞಾನ / ಆಧುನೀಕರಣಗಳಲ್ಲಿ ಸಾಕಷ್ಟು ಬಂಡವಾಳ ಹೂಡದೇ ಇರುವುದು.

3. ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ಆಡಳಿತದ ತೊಡಕು.

ಇ) ಈ ಕೆಳಕಂಡ ಸರ್ಕಾರಿ ಸ್ವಾಮ್ಯದ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಮುಚ್ಚಲು ಆದೇಶ ನೀಡಲಾಗಿದೆ.

1. ಎನ್.ಜಿ.ಇ.ಎಫ್.
2. ಎಂ.ಎಲ್.ಡಬ್ಲ್ಯೂಎಲ್
3. ಕೆ.ಟಿ.ಎಲ್.
4. ಎಂ.ಎ.ಸಿ.ಸಿ.
5. ಮಹದೇವ ಜವಳಿ ಗಿರಣಿ

ನಷ್ಟದಲ್ಲಿರುವ ಸರ್ಕಾರ ಸ್ವಾಮ್ಯದ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರವು ಸಾಧ್ಯವಾದಷ್ಟು ಪ್ರಯತ್ನ ಮಾಡಿದೆ.

ವಕ್ಫ್ ಬೋರ್ಡ್‌ಗಳ ಕಾರ್ಯನಿರ್ವಹಣೆ

2124 (2531) ಶ್ರೀ ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ಜಿಲ್ಲೆಗಳ ವಕ್ಫ್ ಮಂಡಳಿಗಳಿಗೆ 2001-02, 2002-03 ರವರೆಗೆ (28-2-2003) ರವರೆಗೆ ಬಿಡುಗಡೆಗೊಳಿಸಿದ ಹಣವೆಷ್ಟು;

ಆ) ರಾಜ್ಯದ ಎಷ್ಟು ಪ್ರಾಥನಾ ಮಂದಿರಗಳಿಗೆ 1-4-2002 ರಿಂದ 28-2-2003 ರವರೆಗೆ ಅನುದಾನ ಬಿಡುಗಡೆ ಮಾಡಲಾಗಿದೆ?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ರಾಜ್ಯದ ವಿವಿಧ ಜಿಲ್ಲೆಗಳ ವಕ್ಫ್ ಸಲಹಾ ಸಮಿತಿಯ ಅಧ್ಯಕ್ಷರು : ಆಡಳಿತಾಧಿಕಾರಿಗಳಿಗೆ ಗೌರವ ಧನ, ಸಿಬ್ಬಂದಿ ವೇತನ, ಸಮಿತಿಯ ಕಛೇರಿಯ ಸಾದಿಲ್ವಾರು ದೂರವಾಣಿ ಹಾಗೂ ಕಟ್ಟಡ ಬಾಡಿಗೆಗಾಗಿ 2001-2002ನೇ ಸಾಲಿನಲ್ಲಿ ರೂ. 78,13,807-00 ಹಾಗೂ 2002-2003ಕ್ಕೆ (28-2-2003)) ರವರೆಗೆ ರೂ. 82,79,823-00 ಬಿಡುಗಡೆ ಮಾಡಲಾಗಿದೆ.

ಆ) ಪ್ರಾರ್ಥನಾ ಮಸೀದಿಗಳು ಸೇರಿದಂತೆ, 1-4-2002 ರಿಂದ 28-2-2003 ರವರೆಗೆ ಒಟ್ಟು 946 ವಕ್ಫ್ ಸಂಸ್ಥೆಗಳಿಗೆ ರೂ. 275.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ಮಂಡಳಿಯ ಕಾರ್ಯಕ್ರಮ

2125 (2532) ಶ್ರೀ ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ಮಂಡಳಿ 2002-03ರಲ್ಲಿ ಹಾಕಿಕೊಂಡ ಕಾರ್ಯಕ್ರಮಗಳು ಯಾವುವು? (ವಿವರಗಳನ್ನು ತಿಳಿಸುವುದು)

ಅ) ಸರ್ಕಾರ ಮಂಡಳಿಗೆ 2001-02, 2002-03ರಲ್ಲಿ ಬಿಡುಗಡೆಗೊಳಿಸಿದ ಹಣವೆಷ್ಟು;

ಇ) 28-02-2003ರ ವರೆಗೆ ಪಾವತಿಗಾಗಿ ಬಾಕಿ ಇರುವ ಮಂಡಳಿಯ ಸಿಬ್ಬಂದಿ ಸಂಬಳ ಹಾಗೂ ಇತರ ಸಾಲಗಳ ವಿವರಗಳನ್ನು ನೀಡುವುದು?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು)

ಅ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವು 2002-03ನೆ ಸಾಲಿನಲ್ಲಿ, ಹಿಂದಿನ ವರ್ಷಗಳಂತೆ ಮಂಜುಗಡ್ಡೆ, ಉತ್ಪಾದನೆ, ಘನೀಕೃತ ಮೀನು ಉತ್ಪಾದನೆ, ಮಾರಾಟ, ಹಸಿಮೇನು ಮಾರಾಟ ಡೀಸಲ್ ಮಾರಾಟ, ಉಪಹಾರಗೃಹ ನಿರ್ವಹಣೆ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗಲಾಗುತ್ತಿದೆ.

ಆ) ನಿಗಮಕ್ಕೆ ಸರ್ಕಾರವು 2001-02ನೇ ಸಾಲಿನಲ್ಲಿ ಒಟ್ಟು ರೂ. 66.00 ಲಕ್ಷಗಳನ್ನು ಬಿಡುಗಡೆಗೊಳಿಸಿದೆ. 2002-03ನೇ ಸಾಲಿನಲ್ಲಿ ಈವರೆಗೆ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

ಇ) ದಿನಾಂಕ 28-02-2003ರ ವರೆಗೆ ನಿಗಮದ ನೌಕರರಿಗೆ ರೂ. 66.18 ಲಕ್ಷಗಳ ಸಂಬಳ ಮತ್ತು ಇತರೆ ಭತ್ಯೆಗಳನ್ನು ಪಾವತಿಸಲು ಬಾಕಿ ಇರುತ್ತದೆ. ದಿನಾಂಕ 28-02-2003ಕ್ಕೆ ಒಟ್ಟು ರೂ. 247.17 ಲಕ್ಷಗಳ ಸಾಲವನ್ನು ನಿಗಮವು ಮರುಪಾವತಿ ಮಾಡಲು ಬಾಕಿ ಇದೆ. ವಿವರಗಳನ್ನು ಅನುಬಂಧ I ಮತ್ತು II ರಲ್ಲಿ ಕೊಡಲಾಗಿದೆ.

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2532ಕ್ಕೆ

ಅನುಬಂಧ 1

ದಿನಾಂಕ 28-2-2003 ರವರೆಗೆ ಮಂಡಳಿಯ ಸಿಬ್ಬಂದಿಗೆ ಪಾವತಿಗೆ ಬಾಕಿ ಇರುವ ಸಂಬಳದ ವಿವರಗಳು

ಕ್ರಮ ಸಂಖ್ಯೆ	ವಿವರಗಳು	ಮೊತ್ತ (ಲಕ್ಷ ರೂ. ಗಳಲ್ಲಿ)
1.	ಅಕ್ಟೋಬರ್ 2002 ರಿಂದ ಫೆಬ್ರವರಿ 2003 ರವರೆಗೆ ಬಾಕಿ ಇರುವ ನಿವ್ವಳ ಸಂಬಳ (ಕುಳಾಯಿ, ಉಳ್ಳಾಲ, ಗಂಗೊಳ್ಳಿ, ಕಾರವಾರ ಮಡಿಕೇರಿ ಘಟಕಗಳಿಗೆ)	26.50
2.	ಜನವರಿ 2003 ರಿಂದ ಫೆಬ್ರವರಿ 2003 ರವರೆಗೆ ಬಾಕಿ ಇರುವ ನಿವ್ವಳ ಸಂಬಳ (ಬೆಂಗಳೂರು ಎಲ್ಲಾ ಘಟಕಗಳು) ತದ್ರಿ ಭಟ್ಕಳ, ಮಲ್ಪೆ, ಹೊನ್ನಾವರ ಮತ್ತು ಎಫ್ಎಫ್ಎಂ ಘಟಕ ಮಂಗಳೂರು	9.50
3.	ಇಪಿಎಫ್ : ಇಎಸ್ಇ ವೃತ್ತಿ ತೆರಿಗೆ, ಜೀವವಿಮಾ ಮತ್ತು ಇತರೆ ಬಾಬ್ತು ಪಾವತಿಗೆ ಬಾಕಿ	30.18
	ಒಟ್ಟು	**66.18**

ಅನುಬಂಧ 2

ಮಂಡಳಿಯ ದಿನಾಂಕ 28-2-2003 ರವರೆಗಿನ ಸಾಲಗಳ ವಿವರಗಳು

ಕ್ರಮ ಸಂಖ್ಯೆ	ವಿವರಗಳು	ಮೊತ್ತ (ಲಕ್ಷ ರೂ. ಗಳಲ್ಲಿ)
1.	ಸಿಂಡಿಕೇಟ್ ಬ್ಯಾಂಕ್ ಓವರ್ ಡ್ರಾಫ್ಟ್	95-00
2.	ಸಿಂಡಿಕೇಟ್ ಬ್ಯಾಂಕ್ ವರ್ಕಿಂಗ್ ಕ್ಯಾಪಿಟಲ್ ಸಾಲ	9-00
3.	ಭಟ್ಕಳ್ ಅರ್ಬನ್ ಕೋ-ಆಪರೇಟೀವ್ ಬ್ಯಾಂಕ್	30-00
4.	ಸರ್ಕಾರದಿಂದ ಪಡೆದ ಸಾಲ	75-00
5.	ತುಂಗಭದ್ರಾ ಫಿಶ್‌ನೆಟ್ ಮೇಕಿಂಗ್ ಪ್ಲಾಂಟ್ ಸಾಲ	38.17
	ಒಟ್ಟು	247.17

ಸಣ್ಣ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯಗಳು

2126 (2298) ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು): ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

ಆ) ಈಗಾಗಲೇ ಮುಚ್ಚಿರುವ ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರವು ಈ ಕೈಗಾರಿಕೆಗಳಿಗೆ ಒದಗಿಸುವ ವಿದ್ಯುತ್ ದರವನ್ನು ಕಡಿಮೆಗೊಳಿಸಲು ಸಾಧ್ಯವಿಲ್ಲವೇ; ಇಲ್ಲದಿದಲ್ಲಿ, ಕಾರಣವೇನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) ರಾಜ್ಯದ ಕೈಗಾರಿಕಾ ನೀತಿ 2001-06 ರಂತೆ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಒತ್ತು ನೀಡಲಾಗಿದೆ. ಮಾಲೂರು, ಬಾಗಲಕೋಟೆ, ಬೆಳಗಾವಿ, ಹಿರಿಯೂರು, ಜೀವರ್ಗಿ, ದಕ್ಷಿಣ ಕನ್ನಡ ಮತ್ತು ಮದ್ದೂರು ಇಲ್ಲಿ 7 ಕೃಷಿ ಆಹಾರ ಸಂಸ್ಕರಣ ಪಾರ್ಕುಗಳನ್ನು ಅಭಿವೃದ್ಧಿಪಡಿಸಲಾಗುವುದು. ದೊಡ್ಡಬಳ್ಳಾಪುರ ಮತ್ತು ಬಳ್ಳಾರಿಯಲ್ಲಿ ಅಪೆರೆಲ್ ಎಕ್ಸ್‌ಪೋರ್ಟ್ ಪಾರ್ಕ್, ಹಾಸನದಲ್ಲಿ ವಿಶೇಷ ಆರ್ಥಿಕ ವಲಯ, ಮಂಗಳೂರಿನಲ್ಲಿ ಕರಾವಳಿ ವಿಶೇಷ ಆರ್ಥಿಕ ವಲಯ ಮತ್ತು ಎಕ್ಸ್‌ಪೋರ್ಟ್ ಪ್ರೋಮೋಷನ್ ಇಂಡಸ್ಟ್ರಿಯಲ್ ಪಾರ್ಕ್, ಬಿಡದಿ, ಶಿವಮೊಗ್ಗ ಮತ್ತು ಧಾರವಾಡದಲ್ಲಿ ಆಟೋ ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸಲಾಗುವುದು.

ಶೇ. 50 ಕ್ಕಿಂತ ಜಾಸ್ತಿ ಕೈಗಾರಿಕಾ ಬಳಕೆ ಇರುವ 11 ಕೆ.ವಿ. ಫೀಡರ್‌ಗಳನ್ನು ಪ್ರತ್ಯೇಕ ಕೈಗಾರಿಕಾ ಫೀಡರ್ / ಎಕ್ಸ್‌ಪ್ರೆಸ್ ಫೀಡರ್‌ಗಳನ್ನಾಗಿ ಪರಿವರ್ತಿಸುವುದು.

ಉದ್ಯಮಶೀಲರಿಗೆ ಕೈಗಾರಿಕಾ ಪ್ರದೇಶದ ಬೆಲೆ ದುಬಾರಿಯಾಗದಂತೆ ಖಾತರಿ ಪಡಿಸಲು ಲಭ್ಯವಿರುವ ಎಲ್ಲಾ ಸರ್ಕಾರಿ ಜಮೀನನ್ನು ಕೆ.ಐ.ಎ.ಡಿ.ಬಿ. ಗೆ ಉಚಿತವಾಗಿ ವರ್ಗಾವಣೆ ಮಾಡುವುದು.